**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,</u>**

**<u>ಪೊನ್ನಂಪೇಟೆ.</u>**

**O.S. ನಂ. 41/2013**

**<u>ದಿನಾಂಕಃ– 04.08.2026. ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

| | | |
|---|---|---|
| ಸಾಕ್ಷಿಯ ಹೆಸರು | : | ನಾಗೇಶ್ ಎಂ ಕೆ |
| ತಂದೆಯ ಹೆಸರು | : | ಕೃಷ್ಣಮೂರ್ತಿ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಸರ್ವೆಯರ್ |
| ವಾಸ ಸ್ಥಳ | : | ಗೋಣಿಕೊಪ್ಪ |

**<u>ಮುಖ್ಯ ವಿಚಾರಣೆಃ –ನ್ಯಾಯಾಲಯದಿಂದ ಃ –</u>**

ಸಾಕ್ಷಿಯು ದಿ. 28.11.2024 ಮತ್ತು 17.03.2026 ರ ವರದಿಗಳನ್ನು ನೋಡಿ ಗುರುತಿಸಿರುತ್ತಾರೆ. ಇವುಗಳ ಜೊತೆ ಇರುವ ನಕ್ಷೆಗಳನ್ನು ನೋಡಿ ಗುರುತಿಸಿರುತ್ತಾರೆ. ಈದಾಖಲೆಗಳು ನ್ಯಾಯಾಲಯದ ದಾಖಲೆಗಳಾಗಿದ್ದು ಅವುಗಳನ್ನು ನಿಶಾನೆಗೊಳಿಸಿರುವುದಿಲ್ಲ.

**<u>ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ಶ್ರೀಮತಿ ಬಿ. ಯು. ಪಿ. ವಕೀಲರಿಂದಃ</u>**

ಸರ್ವೆ ನಂ. 98/2 ದಾವಾ ಶೆಡ್ಯೂಲ್ ಆಸ್ತಿಯ ಆರ್ ಟಿ ಸಿ 2 ಎಕರೆ 60 ಸೆಂಟ್ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ವೇಳೆ ಆರ್ ಟಿ ಸಿ ದಾಖಲೆಯನ್ನು ನಾನು ನೋಡಲಿಲ್ಲ. ಪ್ರತಿವಾದಿಯ ಆಸ್ತಿಯ ಸರ್ವೆ ನಂ. 98/1 ಆರ್ ಟಿ ಸಿ ಅನ್ನು ನಾನು ನೋಡಲಿಲ್ಲ. ನಾನು ಎರಡು ಬಾರಿ ಸರ್ವೆ ಮಾಡಿರುತ್ತೇನೆ. ನಾನು ಈ ಎರಡು ವರದಿಗಳನ್ನು ಖಾಯಂ ಗುರುತುಗಳಾದ ಅರಮನೆ ಕಡಂಗ, ಗದ್ದೆ ಮತ್ತು ತೋಡುವಿನ ಆಧಾರ ಸರ್ವೆ ಮಾಡಿರುತ್ತೇನೆ. ಮೊದಲನೇಯ ವರದಿಯಲ್ಲಿ ಸರ್ವೆ ಕಲ್ಲುಗಳ ಗುರುತುಗಳನ್ನು ನಾನು ತೆಗೆದುಕೊಂಡಿಲ್ಲ, ಕಾರಣ ಅವು ಯಾವುವು ಇರಲಿಲ್ಲ. ನನ್ನ

ಮೊದಲನೇ ವರದಿಯಂತೆ ಪ್ರತಿವಾದಿಯ ಸರ್ವೆ ನಂ. 98/1 ರಲ್ಲಿ ಯಾವುದೇ ಒತ್ತುವರಿ ಆಗಿಲ್ಲ ಎಂದು ವರದಿ ನೀಡಿದ್ದೆ ಎಂದರೆ ಸರಿ.

ಮೊದಲನೇ ವರದಿಯಲ್ಲಿ ಸರ್ವೆ ನಂ. 98/2 ರಲ್ಲಿ 68 ಸೆಂಟ್ ಜಾಗವನ್ನು ಸರ್ವೆ ನಂ. 98/1 ರ ಪ್ರತಿವಾದಿಗಳು ಒತ್ತುವರಿ ಮಾಡಿರುವುದಾಗಿ ತಿಳಿಸಿದ್ದೆ ಎಂದರೆ ಸರಿ. 2ನೇ ವರದಿ ನ್ಯಾಯಾಲಯದ ಆದೇಶದಂತೆ ಪುನಃ ಮೇಲೆ ಹೇಳಿದ permanent station ಗಳಂತೆ ಸರ್ವೆ ಮಾಡಿರುತ್ತೇನೆ. ಇದರ ಜೊತೆಗೆ ಗ್ರಾಮ ನಕ್ಷೆಯ ಆಧಾರವು ಗಣನೆಗೆ ತೆಗೆದುಕೊಳ್ಳಲಾಯಿತು.

2 ನೇ ವರದಿ ನಕ್ಷೆಯಲ್ಲಿ ಹಸಿರು ಮತ್ತು ಹಳದಿ ಬಣ್ಣದಿಂದ ಕೆಳಗೆ ನಮೂದಿಸಿರುವ ಜಾಗದಲ್ಲಿ ವಿಸ್ತೀರ್ಣವನ್ನು ತಿದ್ದಿರುತ್ತೇನೆ ಎಂದರೆ ಸರಿ. ನಾನೇ ಇವುಗಳನ್ನು ತಿದ್ದಿರುತ್ತೇನೆ, ಆದರೆ ಸಹಿ ಹಾಕಿರುವುದಿಲ್ಲ. ನಾನು ಹೇಳಿರುವಂತೆ ಯಾವುದೇ ಒತ್ತುವರಿ ಆಗಿಲ್ಲ, ನಾನು ಸ್ಥಳಕ್ಕೆ ಹೋಗಿ ಪುನಃ ಸರ್ವೆ ಮಾಡಿರುವುದಿಲ್ಲ ಮತ್ತು ಈ ತಿದ್ದುರುವುದನ್ನೆಲ್ಲ ಕಚೇರಿಯಲ್ಲಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನಾನು plain table survey ಮಾಡಿರುತ್ತೇನೆ. ಪ್ರತಿವಾದಿಯ ಆಸ್ತಿಯಿಂದ ಸರ್ವೆ ಶುರು ಮಾಡಿರುತ್ತೇನೆ. ನಾನು ಆ ವಾದಿ ಮತ್ತು ಪ್ರತಿವಾದಿ ಇಬ್ಬರ ಆಸ್ತಿಗಳನ್ನು ಸಂಪೂರ್ಣವಾಗಿ ಅಳತೆ ಮಾಡಿರುತ್ತೇನೆ. 1 ನೇ ವರದಿಯಲ್ಲಿ ಸರ್ವೆ ನಂ. 98/1 ರ ಪೂರ್ತಿ ವಿಸ್ತೀರ್ಣ ತಿಳಿಸಿರುತ್ತೇನೆ, 2 ನೇ ವರದಿಯಲ್ಲಿ ಇರುವುದಿಲ್ಲ, ಆದರೆ ಸರ್ವೆ ನಂ. 98/2ರಲ್ಲಿ 68 ಸೆಂಟ್ ಜಾಗವನ್ನು ಸರ್ವೆ ನಂ. 98/1 ರವರು ಒತ್ತುವರಿ ಮಾಡಿರುತ್ತಾರೆ. 2 ನೇ ವರದಿಯಲ್ಲಿ ಈ ಎರಡು ಆಸ್ತಿಗಳನ್ನು ಸಂಪೂರ್ಣವಾಗಿ ಸರ್ವೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಂಪೂರ್ಣವಾಗಿ ಸರ್ವೆ ಮಾಡದ ಕಾರಣ ಈ ಒತ್ತುವರಿ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**O.S. No. 41/2013**

**ಪಾಟೀ ಸವಾಲುಃ 3 ರಿಂದ 5 ನೇ ಪ್ರತಿವಾದಿ ಪರ ಶ್ರೀ. ಎಂ. ಜಿ. ಆರ್. ವಕೀಲರಿಂದಃ**

**3 ರಿಂದ 5 ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರಾಗಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಪಾಟೀ ಸವಾಲು ಃ - ವಾದಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

ಮರು ವಿಚಾರಣೆಃ **ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ